ಈ ದಿನ ದಿನಾಂಕಃ 17-10-2022 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲು ಶ್ರೀಃ ವೈ.ಎಂ.ಆರ್ ವಕೀಲರಿಂದಃ</u>**

ವಾದಿಯವರ ಪೂರ್ವ ದಿಕ್ಕಿಗೆ ನನ್ನ ಆಸ್ತಿ ಬರುತ್ತದೆ ಎಂದರೆ ಸರಿ . ನಿ ಪಿ 4 ರಲ್ಲಿ ಇರುವ ಚಕ್ಕುಬಂಧಿ ಸಾಕ್ಷಿಗೆ ತೋರಿಸಿದಾಗ ಸರಿ ಎಂದು ನುಡಿಯತ್ತಾರೆ . ಸಾಕ್ಷಿಯು ಮುಂದುವರೆದು ನಾನು ಮನೆ ಕಟ್ಟಲು 3 ಅಡಿ ವಿಸ್ತೀರ್ಣ ವನ್ನು ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ . ನ್ಯಾಯಾಲಯದಿಂದ ಕೊರ್ಟ್ ಕಮಿಷನರ್ ವಿವಾದಿತ ಸ್ದಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ . ಅವರು ಬರುವ ಸಮಯಕ್ಕೆ ಮೊದಲು ನೊಂದಾಯಿತ ಅಂಚೆಯ ಮೂಲಕ ನೋಟಿಸು ಕಳುಹಿಸಿರುತ್ತಾರೆ ಎಂದರೆ ಸರಿ . ಸದರಿ ಸಮಯದಲ್ಲಿ ಕೊರ್ಟ್ ಕಮಿಷನರ್ ಅಳತೆ ಮಾಡಲು ಸ್ದಳಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ . ಕೊರ್ಟ್ ಕಮಿಷನರ್ ಸ್ದಳ ಪರೀಕ್ಷೆ ಮಾಡಿದ ನಂತರ ವಾಸ್ತವಾಂಶ ತಿಳಿದು ನಾನು ಸಮೀಕ್ಷೆಗೆ ಸಹಿಯನ್ನು ಮಾಡದೇ ಹೋಗಿರುತ್ತೇನೆ ಎಂದರೆ ಸರಿಯಲ್ಲ . ಕೊರ್ಟ್ ಕಮಿಷನರ್ ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯನ್ನು ನಾನು ನನ್ನ ವಕೀಲರ ಮುಖಾಂತರ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಕಚ್ಚಾ ನಕ್ಷೆಯನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ . ಸದರಿ ಸಮಯದಲ್ಲಿ ಕೊರ್ಟ್ ಕಮಿಷನರ್ ನನ್ನ ಹಾಜರಿರುವಿಕೆಯನ್ನು ತಮ್ಮ ವರದಿಯಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ . ದಾವೆಯಲ್ಲಿ ಹಾಕಿರುವ ಬಿ ಷೆಡ್ಯೂಲ್ ಆಸ್ತಿಯನ್ನೇ ಕೊರ್ಟ್ ಕಮಿಷನರ್ ತಮ್ಮ ವರದಿಯಲ್ಲಿ ಸಕಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ . ನಾನು ಸದರಿ ದಾವಾ ಆಸ್ತಿಗೆ ಸಂಬಂಧಪಟ್ಟ ಪ್ರಕರಣ ನ್ಯಾಯಾಲಯದಲ್ಲಿ ಇರುತ್ತದೆ ಎಂದು ಅಳತೆ ಮಾಡಲು ಬರಬೇಡಿ ಎಂದು ಸರ್ವೆಯರ್ ಗೆ ನೋಟಿಸನ್ನು ಕಳುಹಿಸಿರುತ್ತೇನೆ ಎಂದರೆ ಸಾಕ್ಷಿಯು ಅದು ನನ್ನ ತಂದೆಗೆ ಗೊತ್ತಿದೆ ಎಂದು ನುಡಿಯುತ್ತಾರೆ. ನಿಡಿ 1 ರಿಂದ 3 ರಲ್ಲಿರುವ ಪೋಟೋಗಳನ್ನು ನಾನು ದಾವೆಯನ್ನು ದಾಖಲು

This is a True Copy of the Court Records Online. Authenticated @ districts.ecourtsindia.com/cnr/KADG220005932013/truecopy/order-5.pdf

ಮಾಡಿದ ನಂತರ ತೆಗೆದಿರುತ್ತದೆ ಎಂದರೆ ಸಾಕ್ಷಿಯು ದಿನಾಂಕ ನನಗೆ ನೆನಪಿಲ್ಲ , ಆದರೆ 2012-13 ರಲ್ಲಿ ಎಂದು ನುಡಿಯುತ್ತಾರೆ . ನಿ ಡಿ 7 ರಿಂದ 10 ರವರೆಗೆ ಇರುವ ಪೋಟೋಗಳನ್ನು ಯಾವಾಗ ತೆಗೆದಿರುತ್ತಾರೆ ಎಂದರೆ ಸಾಕ್ಷಿಯು 2012-13 ರಲ್ಲಿ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ 8 ರಲ್ಲಿ ಇರುವುದು ಮನೆ ಎಂದರೆ ಸರಿ .ಸದರಿ ಮನೆಯಿಂದ ಪಕ್ಕದಲ್ಲಿ ಇರುವ ಗೊಡೋನ್ ಗೆ ಲೈಸೆನ್ಸ್ ಇದೆ ಎಂದರೆ ಸರಿ . ಸದರಿ ಗೋಡೌನ್ ನ ಅಳತೆ ಪೂರ್ವ ಪಶ್ಚಿಮ 23 ಅಡಿ , ಉತ್ತರ ದಕ್ಷಿಣ 85 ಅಡಿ. ಸದರಿ ಗೋಡೌನ್ ನ ಚಕ್ಕುಬಂಧಿ ಪೂರ್ವಕ್ಕೆ ಉಳಿದ ಜಾಗ , ಪಶ್ಚಿಮಕ್ಕೆ ಗೋಡೌನ್ ನಂತರ ಸರ್ವೆ ನಂಃ 40/1 ಎ ಗೆ ಉಳಿದ ಜಾಗಕ್ಕೆ ಯಾವುದಾದರೂ ದಾಖಲೆ ಇದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪೂರ್ವ ಹಾಗೂ ಪಶ್ಚಿಮಕ್ಕೆ ಸರ್ವೆ ನಂಃ 39 ಹಾಗೂ 40 ಹೊಂದಿಕೊಂಡು ಇವೆ ಎಂದರೆ ಸರಿ . ಈಗಾಗಲೇ ಒತ್ತುವರಿ ಮಾಡಿರುವ ವಿಚಾರ ವಾದಿಯವರು ತಿಳಿಸಿದ್ದರೂ ನಾನು ಜಾಗವನ್ನು ಬಿಟ್ಟು ಕೊಡದೇ ಇದ್ದುದರಿಂದ ವಾದಿಯು ಸದರಿ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ . ಚಂದ್ರಪ್ಪನವರು ಹೂಡಿದ್ದ ದಾವೆಯಲ್ಲಿ ನಾನು ಈ ಮೊದಲು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ . ಸದರಿ ದಾವೆಯಲ್ಲಿ ನಮ್ಮ ವಿರುದ್ದ ತೀರ್ಪು ಬಂದಿರುತ್ತದೆ ಎಂದರೆ ಸರಿಯಲ್ಲ . ನನ್ನ ತಂದೆಯ ಮರಣದ ನಂತರ ಸದರಿ ದಾವೆಗೆ ನಾನು ದಾವಣಗೆರೆಯ ನ್ಯಾಯಾಲಯದಲ್ಲಿ ಅಪೀಲು ಹೂಡಿರುತ್ತೇನೆ ಎಂದರೆ ಸರಿ . ಸದರಿ ಅಸಲು ದಾವೆಯಲ್ಲಿ ನಾನು ಸಾಕ್ಷಿಯನ್ನು ನುಡಿದಿರುತ್ತೇನೆ , ಹಾಗಾಗಿ ನ್ಯಾಯಲಯದಲ್ಲಿ ಸಾಕ್ಷಿ ನುಡಿಯುವ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ . ವಾದಿಗೆ ಗಂಡು ಹಾಗೂ ಹೆಣ್ಣು ಮಕ್ಕಳುಗಳು ಇರುವುದಿಲ್ಲ ಎಂದರೆ ಸರಿ . ವಾದಿ ಹಾಗೂ ಅವರ ಹೆಂಡತಿ ಮಾತ್ರ ಮನೆಯಲ್ಲಿ ಇರುತ್ತಾರೆ ಎಂದರೆ ಸರಿ . ವಾದಿಯವರಿಗೆ 83 ವರ್ಷ ವಯಸ್ಸು ಹಾಗೂ ಅಶಕ್ತರು ಇರುವುದರಿಂದ ನಾನು ದುರುಪಯೋಗಪಡಿಸಿಕೊಂಡು ಸದರಿ ಜಮೀನಿನಲ್ಲಿ ಅಕ್ರಮವಾಗಿ ಪ್ರವೇಶ ಮಾಡಿರುತ್ತೇನೆ ಎಂದರೆ

This is a True Copy of the Court Records Online. Authenticated @ districts.ecourtsindia.com/cnr/KADG220005932013/truecopy/order-5.pdf

www.ecourtsindia.com

ಸರಿಯಲ್ಲ . ವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ನಮ್ಮ ಮನೆಯ ಗಲೀಜು ನೀರನ್ನು ಅವರ ಜಾಗಕ್ಕೆ ಹರಿಯಲು ಬಿಡುತ್ತೇನೆ ಎಂದರೆ ಸರಿಯಲ್ಲ . ಸದರಿ ವಿಚಾರದ ಬಗ್ಗೆ ವಾದಿಯವರು ಸಂತೆಬೆನ್ನೂರು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲಿಯವರೆಗೆ ಯಾವ ಪೊಲೀಸಿನವರು ನಮ್ಮನ್ನು ಕರೆಯಿಸಿಲ್ಲ ಹಾಗೂ ಯಾವುದೇ ವಿಚಾರಣೆಯನ್ನು ನಡೆಸಿರುವುದಿಲ್ಲ ಎಂದು ನುಡಿಯುತ್ತಾರೆ . ಭೂ ಪರಿವರ್ತನೆ ಮಾಡಿಸಿಕೊಂಡ ಸರ್ವೆ ನಂಃ 40 ರಲ್ಲಿ ಇರುವ ಜಮೀನಿನ ಚಕ್ಕುಬಂಧಿಗಳು ಪೂರ್ವಕ್ಕೆ ಮತ್ತು ಉತ್ತರಕ್ಕೆ ನಮ್ಮದೇ ಜಮೀನು , ಪಶ್ಚಿಮಕ್ಕೆ ರುದ್ರಪ್ಪನವರ ಜಮೀನು , ದಕ್ಷಿಣಕ್ಕೆ ದಾರಿ .

ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.

This is a True Copy of the Court Records Online. Authenticated @ districts.ecourtsindia.com/cnr/KADG220005932013/truecopy/order-5.pdf